**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಬಂಗಾರಪೇಟೆ**

**ಸಿ.ಸಿ ನಂ. 1065/2018**

ಪಿರ್ಯಾದಿ: ಕರ್ನಾಟಕ ಸರ್ಕಾರ ಪರವಾಗಿ ಬಂಗಾರಪೇಟೆ ಪೋ.ಠಾಣೆ.

**– ವಿರುದ್ಧ –**

ಆರೋಪಿಗಳು:

1. **ಶಬ್ಬಿರ್ ಪಾಷಾ**
   ಬಿನ್ ಅಬ್ದುಲ್ ರಹಿಂ ಸಾಬ್,
   ಸುಮಾರು 45 ವರ್ಷ,
   ವಾಸಃ ಖಾದರ್ ಲೇಔಟ್,
   ಬಂಗಾರಪೇಟೆ.

2. **ಅಮರುಲ್ಲಾ**
   ಬಿನ್ ಶೈಕ್ ಮುನ್ನಾವರ್,
   ಸುಮಾರು 28 ವರ್ಷ,
   ವಾಸಃ ಎಸ್. ಕಂಪೌಂಡ್,
   ಬಂಗಾರಪೇಟೆ

3. **ಜೋಧಾರಾಂ**
   ಬಿನ್ ದೇವರಾಂಜೀ,
   ಸುಮಾರು 26 ವರ್ಷ,
   ವಾಸಃ ಗಾಂಧಿ ನಗರ,
   ಬಂಗಾರಪೇಟೆ

4. **ಸಂತೋಷ ಬಿ ಸಿ**
   ಬಿನ್ ಪ್ರಭಾಕರ,
   ಸುಮಾರು 32 ವರ್ಷ,
   ವಾಸಃ ಗಾಂಧಿ ನಗರ,
   ಬಂಗಾರಪೇಟೆ

# ದೋಷಾರೋಪಣೆ

ಶ್ರೀ, ಚಂದ್ರಶೇಖರ್ ಅಲಬೂರ್, ಬಿ.ಎ. ಎಲ್.ಎಲ್.ಬಿ. 2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಬಂಗಾರಪೇಟೆ ಆದ ನಾನು ನಿಮ್ಮ ಮೇಲೆ ಈ ಕೆಳಗಿನಂತೆ ದೋಷಾರೋಪಣೆ ಹೊರಿಸುತ್ತೇನೆ.

ಚಾಸಾ-1 ಶಶಿಕುಮಾರ ರವರು ಐರಿಷ್ ಸರ್ವೀಸ್ ಪ್ರೈವೈಟ್ ಲಿಮಿಟೆಡ್ ಇಂದಿರಾನಗರ, ಬೆಂಗಳೂರಿನಲ್ಲಿ ಕೆಲಸ ಮಾಡುತ್ತಿದ್ದು ಟಿ.ವಿ.ಎಸ್ ಮೋಟಾರು ಕಂಪನಿ ಲಿಮಿಟೆಡ್ ಗೆ ಸಂಬಂದಿಸಿದ ಆಟೋ ಮೊಬೈಲ್ಸ್ ನ ಬಿಡಿ ಭಾಗಗಳನ್ನು, ಟ್ರೇಡ್ ಮಾರ್ಕ್ ಅನ್ನು ಕಾಫಿರೈಟ್ ಪ್ಯಾಕ್ ಗಳನ್ನು ಆರೋಪಿ 1 ರಿಂದ 4 ರವರು ಆಟೋ ಮೊಬೈಲ್ಸ್ ಅಂಗಡಿಯನ್ನು ಬಂಗಾರಪೇಟೆ ಪಟ್ಟಣದಲ್ಲಿ ಇಟ್ಟುಕೊಂಡಿದ್ದು ಅಂಗಡಿಯ ಮೇಲೆ ದಾಳಿ ಪರಿಶೀಲನೆ ಮಾಡಲು ಕೋರಿದ್ದು ಚಾಸಾ-3 ತಬರೇಜ್ ಮತ್ತು ಚಾಸಾ-4 ಕಾರ್ತಿಕ್ ರವರನ್ನು ಪಂಚರಾಗಿ ಬರಮಾಡಿಕೊಂಡು ಪಂಚರೊಂದಿಗೆ ಚಾಸಾ-1 ಶಶಿಕುಮಾರ ಮತ್ತು ಚಾಸಾ-2 ಇಲೆನ್ ಚೆಂಜಿನ್ ಹಾಗೂ ಚಾಸಾ-5 ರಿಂದ 12 ರವರೊಂದಿಗೆ ಆರೋಪಿ 1 ರಿಂದ 4 ರವರ ಅಂಗಡಿಯ ಮಳಿಗೆಯ ಮೇಲೆ ದಾಳಿ ಮಾಡಿ ಚಾಸಾ-1 ಶಶಿಕುಮಾರ ಮತ್ತು ಚಾಸಾ-2 ಇಲೆನ್ ಚೆಂಜಿನ್ ರವರು ಪರಿಶೀಲನೆ ಮಾಡಿ ಟಿ.ವಿ.ಎಸ್ ಮೋಟಾರು ಕಂಪನಿಯ ಹೆಸರನ್ನು ನಕಲಿಯಾಗಿ ಉಪಯೋಗಿಸಿ ನಕಲಿ ಬಿಡಿ ಭಾಗಗಳನ್ನು ದಾಸ್ತಾನು ಮಾಡಿಕೊಂಡು ಕಂಪನಿಯ ಕಾಫಿರೈಟ್ ಹಕ್ಕನ್ನು ಉಲ್ಲಂಘಿಸಿ ಮಾರಾಟ ಮಾಡುತ್ತಿರುತ್ತಾರೆಂದು ವಶಪಡಿಸಿಕೊಂಡಿದ್ದ ಸ್ವತ್ತುಗಳನ್ನು ಆಟೋ ಮೊಬೈಲ್ಸ್ ಕಂಪನಿಗೆ ಪರಿಶೀಲನೆಗಾಗಿ ಕಳುಹಿಸಿದ್ದು ಅದರಲ್ಲಿ Cabe assy choke spoket bubber ಇದು ಟಿ.ವಿ.ಎಸ್ ಮೋಟಾರು ಕಂಪನಿಯದಾಗಿದ್ದು, ಈ ಮೂಲಕ ಆರೋಪಿಗಳಾದ ನೀವುಗಳು ಭಾರತೀಯ ದಂಡ ಸಂಹಿತೆ ಕಲಂ.469 ಸಹವಾಚಕ ಕಲಂ 51(1), 51(ಬಿ), 63 COPYRIGHT ACT, 1957 ರ ಮೇರೆಗೆ ಶಿಕ್ಷಾರ್ಹ ಅಪರಾಧ ಎಸಗಿರುತ್ತೀರೆಂದು ದೂಷಿಸಲಾಗಿದೆ.

ಆರೋಪಿಗಳು ಟಿ.ವಿ.ಎಸ್ ಮೋಟಾರು ಕಂಪನಿಯ ಹೆಸರನ್ನು ಬಳಸಿಕೊಂಡು ಕಾಫಿರೈಟ್ ಹಕ್ಕನ್ನು ಉಲ್ಲಂಘಿಸಿ ಇದನ್ನು ಸಾರ್ವಜನಿಕರಿಗೆ ಮಾರಾಟ ಮಾಡಿದ್ದು ಇದರಿಂದ ಸರ್ಕಾರದ ಆದಾಯಕ್ಕೆ ನಷ್ಟವುಂಟು ಮಾಡಿ ನಕಲಿ ಬಿಡಿಭಾಗಗಳನ್ನು ಸಾರ್ವಜನಿಕರಿಗೆ ಮಾರಾಟ ಮಾಡಿ, ಮೋಸ ಮಾಡಿದ್ದು, ಈ ಮೂಲಕ ಆರೋಪಿಗಳಾದ ನೀವುಗಳು ಭಾರತೀಯ ದಂಡ ಸಂಹಿತೆ ಕಲಂ.420 ಸಹವಾಚಕ ಕಲಂ 51(1), 51(ಬಿ), 63 COPYRIGHT ACT, 1957 ರ ಮೇರೆಗೆ ಶಿಕ್ಷಾರ್ಹ ಅಪರಾಧ ಎಸಗಿರುತ್ತೀರೆಂದು ದೂಷಿಸಲಾಗಿದೆ.

(ಈ ಆಪಾದನೆಯನ್ನು ತೆರೆದ ನ್ಯಾಯಾಲಯದಲ್ಲಿ ಆರೋಪಿಗೆ ತಿಳಿದಿರುವ ಭಾಷೆಯಲ್ಲಿ ತಿಳಿಸಿ ಓದಿ ಹೇಳಿ ಕೇಳಲಾಗಿ ಆರೋಪಿಗಳು ನೀಡಿರುವ ಉತ್ತರಗಳನ್ನು ಪಡೆದುಕೊಂಡಿದ್ದು ಅವು ಸರಿ ಇವೆ ಎಂದು ದೃಢೀಕರಿಸಲಾಯಿತು)

**ದಿನಾಂಕಃ** 24.10.2024

ಸಹಿ/-
(ಚಂದ್ರಶೇಖರ್ ಅಲಬೂರ್)
**C/c** ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ. ಬಂಗಾರಪೇಟೆ